ವೃದ್ಧ ಅನಾಥರಿಗೆ ಆಶ್ರಯ ಒದಗಿಸುವ ಬಗ್ಗೆ.

3727-ಶ್ರೀ ಡೆರಿಕ್ ಎಂ.ಬಿ. ಫುಲಿನ್ ಫೋ,(ನಾಮನಿರ್ದೇಶನ ಹೊಂದಿದವರು): ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಮಾಜ ಕಲ್ಯಾಣ ಇಲಾಖೆಯು ಸಮಾಜದ ಅನಾಥ ವಯೋವೃದ್ಧರಿಗಾಗಿ ವೃದ್ಧಾಶ್ರಮಗಳನ್ನು ನಡೆಸುತ್ತಿದೆಯೇ?*

ಆ) *ಬೆಂಗಳೂರು ನಗರ ಹಾಗೂ ರಾಜ್ಯ ಇನ್ನಿತರ ಸ್ಥಳಗಳಲ್ಲಿರುವ ಇಂತಹ ಸಂಸ್ಥೆಗಳು ಎಷ್ಟು? ಮತ್ತು ಪ್ರತಿಯೊಂದು ಸಂಸ್ಥೆಯ ಸಾಮರ್ಥ್ಯ ಮತ್ತು ನಿವಾಸಿಗಳ ಸಂಖ್ಯೆ ಎಷ್ಟು?*

ಇ) *ದತ್ತಿ ಮೂಲಕ ಮತ್ತು ಸಮಾಜ ಸೇವಾ ಸಂಸ್ಥೆಗಳ ಸಹಾಯದಿಂದ ಸರ್ಕಾರವು ಇಂತಹ ಸಂಸ್ಥೆಗಳನ್ನು ಸ್ಥಾಪಿಸಲು ಪರಿಶೀಲಿಸುತ್ತಿದೆಯೇ?*

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಐದು - ವಿವರಗಳು ಈ ಕೆಳಕಂಡಂತೆ ಇವೆ.

	ಸಂಸ್ಥೆಯ ಹೆಸರು	ಸಾಮರ್ಥ್ಯ	ನಿವಾಸಿಗಳ ಸಂಖ್ಯೆ
1)	ಸಮಾಜ ಸೇವಾ ಸಂಕೀರ್ಣ, ಬೆಂಗಳೂರು.	100	48
2)	ಫ್ರೆಂಡ್ ಇನ್ ನೀಡ್ ಸೊಸೈಟಿ, ಬೆಂಗಳೂರು	44	44
3)	ಛೆಲ್ಡೈರ್ ಹೋಂ, ಬೆಂಗಳೂರು.	68	68
4)	ಛೆಲ್ಡೈರ್ ಹೋಂ ಇಂಡಿಯಾ, ಮಂಗಳೂರು.	24	24
5)	ಅಭಯ ಆಶ್ರಯ, ಮಂಗಳೂರು.	87	87

ಇ) ಹೌದು.

ಹಿಂದುಳಿದಿರುವ ಆಂಗ್ಲೋ ಇಂಡಿಯನ್ ಬಗ್ಗೆ.

3747-ಶ್ರೀ ಡೆರಿಕ್ ಎಂ.ಬಿ. ಫುಲಿನ್ ಫಾ (ನಾಮನಿರ್ದೇಶನ ಹೊಂದಿದವರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಂಗ್ಲೋ ಇಂಡಿಯನ್ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯನ್ನು ಸರ್ಕಾರವು ಗುರ್ತಿಸಿದೆಯೇ?*

ಆ) *ಆಂಗ್ಲೋ ಇಂಡಿಯನ್ ಸಮುದಾಯದ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಲು ಮತ್ತು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?*

ಇ) *ರಾಜ್ಯ ಸರ್ಕಾರಿ ಕಛೇರಿಯಲ್ಲಿ ಕಂಪನಿಗಳಲ್ಲಿ ನಿಗಮಗಳಲ್ಲಿ ರಾಜ್ಯ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿರುವ ಉದ್ಯಮಗಳಲ್ಲಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಎಷ್ಟು ಜನ ಆಂಗ್ಲೋ ಇಂಡಿಯನ್ನರು ಉದ್ಯೋಗದಲ್ಲಿರುತ್ತಾರೆ?*

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಸರ್ಕಾರದ ಆದೇಶದ ಸಂಖ್ಯೆ: ಸಕಾ 66 ಬಿಸಿಎ 86 ದಿನಾಂಕ : 13-10-86ರ ಪ್ರಕಾರ ಭಾರತೀಯ ಸಂವಿಧಾನ 15(4) ಮತ್ತು 16(4)ನೇ ವಿಧಿಗಳ ಪ್ರಕಾರ ಶೈಕ್ಷಣಿಕ ಮತ್ತು ಔದ್ಯೋಗಿಕ ಮೀಸಲಾತಿಯನ್ನು 'ಇ' ಗುಂಪಿನಡಿಯಲ್ಲಿ ವಾರ್ಷಿಕವಾಗಿ ಆದಾಯ ರೂ. 8000.00ಕ್ಕಿಂತ ಕಡಿಮೆ ಇದ್ದಲ್ಲಿ ಪಡೆಯಬಹುದಾಗಿದೆ. ಇದರ ಜೊತೆಗೆ ಸ್ವಾವಲಂಬನ ಯೋಜನೆಯಡಿಯಲ್ಲಿ ಸಾಲದ ಸೌಲಭ್ಯ ಪ್ರೋರ್ಮನ್‌ಶಿಪ್ ತರಬೇತಿ ಮತ್ತು ವಾಹನ ಚಾಲನ ತರಬೇತಿ ಸೌಲಭ್ಯಗಳನ್ನು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಮತೀಯ ಅಲ್ಪಸಂಖ್ಯಾತರು ಪಡೆದುಕೊಳ್ಳಬಹುದಾಗಿದೆ.

ಇ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ಯಮಗಳಲ್ಲಿ ಒಟ್ಟು 33 ಜನ ಆಂಗ್ಲೋ ಇಂಡಿಯನ್ನರು ಸೇವೆ ಸಲ್ಲಿಸುತ್ತಿದ್ದಾರೆ.

ಆಂಗ್ಲೋ ಇಂಡಿಯನ್ ಜನಾಂಗದ ಏಳಿಗೆ.

3748 - ಶ್ರೀ ಡೆರಿಕ್ ಎಂ.ಬಿ. ಫುಲಿನ್ ಫಾ (ನಾಮನಿರ್ದೇಶನ ಹೊಂದಿದವರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಂಗ್ಲೋ ಇಂಡಿಯನ್ ಸಮುದಾಯದಲ್ಲಿ ಶೇಕಡಾ 90 ಕ್ಕಿಂತ ಹೆಚ್ಚಿನವರು ಬಡತನ ರೇಖೆಗಿಂದ ಕೆಳಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಶೇಕಡಾ 40 ರಿಂದ 50ರಷ್ಟು ಈ ಸಮುದಾಯದ ಜನರ ಸ್ಥಿತಿ ತುಂಬಾ ಕೆಳಮಟ್ಟದಲ್ಲಿರುವುದು ಮತ್ತು ಇವರಿಗೆ ತಕ್ಷಣದ ಪುನರ್ವಸತಿ ಕಾರ್ಯಕ್ರಮದ ಅವಶ್ಯಕತೆ ಇದೆ ಎಂಬುದು ನಿಜವೇ?*

ಇ) *ಹಾಗಿದ್ದಲ್ಲಿ ಸರ್ಕಾರವು ಈ ಜನಾಂಗದವರಿಗೆ ತುರ್ತು ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಿ, ಮೇಲಕ್ಕೆತ್ತಲು ಕ್ರಮ ಕೈಗೊಳ್ಳುವುದೇ?*

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)ಛ

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಆಂಗ್ಲೋ ಇಂಡಿಯನ್ ಸಮುದಾಯದ ಜನರನ್ನು ಧಾರ್ಮಿಕ ಅಲ್ಪಸಂಖ್ಯಾತರೆಂದು ಪರಿಗಣಿಸಲಾಗಿದೆ ಮತ್ತು ಕುಟುಂಬದ ವಾರ್ಷಿಕ ಆದಾಯ ರೂ.6000-00ಕ್ಕಿಂತ ಮೀರದಿದ್ದಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಇದರ ಮೂಲಕ ಸೌಲಭ್ಯಗಳನ್ನು ಪಡೆಯಬಹುದು.

ಆಂಗ್ಲೋ ಇಂಡಿಯನ್ ಪಂಗಡದವರಿಗೆ ದೊರೆಯುವ ಸೌಲಭ್ಯಗಳು.

3746 - ಶ್ರೀ ಡೆರಿಕ್ ಎಂ. ಬಿ. ಫುಲಿನ್ ಫಾ (ನಾಮನಿರ್ದೇಶನ ಹೊಂದಿದವರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆಂಗ್ಲೋ ಇಂಡಿಯನ್ ಪಂಗಡದವರಿಗೆ ಯಾವುದಾದರೂ ಯೋಜನೆಯಲ್ಲಿ ಸೌಲಭ್ಯ ದೊರೆಯುವುದೇ?*

ಆ) *ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಸದರಿ ಯೋಜನೆಗಳಡಿಯಲ್ಲಿ ಸೌಲಭ್ಯ ಹೊಂದಿದ ಆಂಗ್ಲೋ ಇಂಡಿಯನ್ನರ ಸಂಖ್ಯೆ*